ಅಭಿಷೇಕ್ ಅನಿಸಿಕೆ. 'ಮೊದಲು ಕಥೆ ನನಗೆ ಕನೆಕ್ಟ್ ಆಗಬೇಕು. ಆ ಪಾತ್ರಕ್ಕೆ ನಾನು ಸೂಟ್ ಆಗುತ್ತೇನಾ ಎಂದು ನನ್ನಲ್ಲೇ ಒಂದು ಪ್ರಶ್ನೆ ಹಾಕಿಕೊಳ್ಳುತ್ತೇನೆ. ಇದು ಮೊದಲ ಹಂತವಾದರೆ, ನಿರ್ದೇಶಕರ ಮೇಲಿನ ನಂಬಿಕೆ ಮತ್ತೊಂದು ಹಂತ. ಪ್ರೊಡಕ್ಷನ್ ಹೌಸ್, ಬ್ಯಾನರ್ ಎಲ್ಲವನ್ನೂ ಆಲೋಚಿಸಿ, ಈ ನಾಲ್ಕು ಅಂಶಗಳೂ ಒಪ್ಪಿಗೆಯಾದರೆ ಸಿನಿಮಾದಲ್ಲಿ ಮುಂದುವರೆಯುತ್ತೇನೆ. ಕಥೆಗಳ ಆಯ್ಕೆಯಲ್ಲಿ ನನಗೆ ಯಾವುದೇ ನಿಬಂಧನೆಗಳಿಲ್ಲ. ನನ್ನ ಸಿನಿಮಾ ನೋಡುವ ಪ್ರೇಕ್ಷಕನಿಗೆ ಮೋಸ ಆಗಬಾರದು, ಮನರಂಜನೆ ಸಿಗಬೇಕು ಎಂಬುದಷ್ಟೇ ನನಗೆ ಮುಖ್ಯ. ಅಂಥ ಯಾವ ಪಾತ್ರಗಳನ್ನು ಬೇಕಾದರೂ ಮಾಡುತ್ತೇನೆ' ಎನ್ನುತ್ತಾರೆ.

ಮನೆಯಲ್ಲಿ ಸಿನಿಮಾ ಪರಿಸರದಲ್ಲೇ ಬೆಳೆದ ಇವರ ನಟನಾ ಆಸಕ್ತಿ ಮೇಲೆ ಸಹಜವಾಗಿ ಅಮ್ಮ ಅಪ್ಪನ ಪ್ರಭಾವ ಬೀರಿರಬಹುದು. ಇದನ್ನು ವಿನಯದಿಂದಲೇ ಒಪ್ಪುವ ಅವರು, ಅಭಿನಯ ಹಾಗೂ ಕೆಲಸದಲ್ಲಿನ ಬದ್ಧತೆ ಅಮ್ಮ ಅಪ್ಪನ ಬಳುವಳಿ ಎಂದು ಹೇಳುತ್ತಾರೆ.

ಅಪ್ಪ ಅಂಬರೀಶ್, ಅಮ್ಮ ಸುಮಲತಾ ಅವರಂತೆ ನೀವೂ ರಾಜಕೀಯ ಪ್ರವೇಶಿಸುವ ಯೋಜನೆ ಇದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜಕಾರಣ ಜವಾಬ್ದಾರಿಯುತ ಕ್ಷೇತ್ರ. ಅಧಿಕಾರದ ಆಸೆಪಟ್ಟು ಬಂದವರನ್ನೆಲ್ಲಾ ಜನರೇ ಮೂಲೆಗುಂಪು ಮಾಡಿದ್ದನ್ನು ಕಂಡಿದ್ದೇವೆ. ನಮ್ಮ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಜನರು ಈಗ ಸುಲಭವಾಗಿ ಕಂಡುಹಿಡಿದುಬಿಡುತ್ತಾರೆ. ಆದ್ದರಿಂದ ಜವಾಬ್ದಾರಿಯುತವಾಗಿ, ಒಳ್ಳೆಯ ಉದ್ದೇಶವಿಟ್ಟುಕೊಂಡು ಬಂದವರು ಮಾತ್ರ ಹೆಚ್ಚು ಕಾಲ ಉಳಿಯುತ್ತಾರೆ ಎಂಬುದು ನನ್ನ ನಂಬಿಕೆ. ಸದ್ಯ ರಾಜಕೀಯದ ಆಲೋಚನೆಗಳು ನನಗಿಲ್ಲ. ಅವೆಲ್ಲವನ್ನೂ ಜನರೇ ನಿರ್ಧರಿಸಬೇಕು' ಎಂದು ಹೇಳುತ್ತಾರೆ.

ಇವೆಲ್ಲಕ್ಕಿಂತ ಹೆಚ್ಚಾಗಿ 'ಜೂನಿಯರ್ ರೆಬೆಲ್ ಸ್ಟಾರ್' ಎಂಬ ಜನರ ಪ್ರೀತಿಯ ಜವಾಬ್ದಾರಿ ನನ್ನ ಮೇಲಿದೆ. ಆ ಪ್ರೀತಿಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ನನ್ನದು. ಆ ಜವಾಬ್ದಾರಿಯನ್ನು ನಾನು ನಿಭಾಯಿಸುವ ಆಶ್ವಾಸನೆಯನ್ನೂ ಕೊಡುತ್ತೇನೆ ಎನ್ನುತ್ತಾರೆ.

ಸದ್ಯ ಕನ್ನಡ ಚಿತ್ರರಂಗಕ್ಕೆ ಸುಗ್ಗಿ ಸಮಯ ಬಂದಿದೆ ಎಂದು ಹೇಳುವ ಅಭಿಷೇಕ್ ಅಂಬರೀಶ್, 'ಈಗ ಒಳ್ಳೊಳ್ಳೆ ಕಥೆಗಳು, ಕಂಟೆಂಟ್‌ಗಳು ರೂಪುಗೊಳ್ಳುತ್ತಿವೆ. ಜನ ಹೊಸತನವನ್ನು ಒಪ್ಪುತ್ತಿದ್ದಾರೆ. ಒಳ್ಳೆ ಪ್ರತಿಭೆ, ಸಿನಿಮಾಗಳನ್ನು ಗುರುತಿಸಿ, ಗೆಲ್ಲಿಸುತ್ತಿದ್ದಾರೆ, ಅವುಗಳನ್ನು ಮೆರೆಸುತ್ತಿದ್ದಾರೆ. ಇದನ್ನು ನೋಡಿದರೆ ಖುಷಿಯಾಗುತ್ತದೆ. ಹೊಸದಾಗಿ ಏನೋ ಮಾಡಬೇಕೆನ್ನುವ ಸವಾಲು ಕೂಡ ಚಿತ್ರರಂಗದಲ್ಲಿದೆ. ಹೊಸದನ್ನು ಕೊಟ್ಟರೆ ಜನ ಒಪ್ಪಿಕೊಳ್ಳುತ್ತಾರೆ ಎಂಬ ಧೈರ್ಯವೂ ಈಗ ಬಂದಿದೆ. ಇದು ಇಡೀ ಚಿತ್ರರಂಗಕ್ಕೆ ಒಳ್ಳೆ ಹುಮ್ಮಸ್ಸು, ಬಲ ಕೊಟ್ಟಿದೆ. ಉತ್ತಮ ಕಥೆ, ಒಳ್ಳೆ ನಿರ್ದೇಶಕ, ಅತ್ಯುತ್ತಮ ಕಲಾವಿದರಿಂದ ಕನ್ನಡ ಚಿತ್ರರಂಗ ಮಿನುಗುತ್ತದೆ' ಎಂದು ಸಂತಸ ವ್ಯಕ್ತಪಡಿಸುತ್ತಾರೆ.

'ಇಪ್ಪತ್ತು–ಮೂವತ್ತು ವರ್ಷಗಳ ಹಿಂದೆ ಹೀಗೇ ಇತ್ತು. ನಮ್ಮ ಸಿನಿಮಾಗಳನ್ನು ಬೇರೆ ಭಾಷೆಯವರು ತೆಗೆದುಕೊಳ್ಳುತ್ತಿದ್ದರು. ನಂತರದಲ್ಲಿ ನಾವು ರೀಮೇಕ್‌ಗಳನ್ನು ಮಾಡುತ್ತಾ ಕೂತೆವು. ಹೊಸದಾಗಿ ಏನೂ ಮಾಡಲಿಕ್ಕೆ ಹೋಗಿಲ್ಲ. ಈಗ ಪುನಃ ಆ ಕಾಲ ಬರುತ್ತಿದೆ. ಕನ್ನಡ ಸಿನಿಮಾ ರಂಗಕ್ಕೆ ಮತ್ತೆ ಟೈಂ ಶುರುವಾಗಿದೆ. ಜನರು ಒಳ್ಳೆ ಸಿನಿಮಾಗಳನ್ನು ಕೈಬಿಡುವುದಿಲ್ಲ ಎಂಬುದನ್ನು ಜನರೇ ತೋರಿಸುತ್ತಿದ್ದಾರೆ. ಈಗಿನ ಕೆಲವು ಸಿನಿಮಾಗಳಿಂದ ಮತ್ತೆ ಹೊಸತುಗಳನ್ನು ಕಲಿಯುತ್ತಿದ್ದೇವೆ. ಇದು ಒಳ್ಳೆ ಸೂಚನೆ. ಮುಂದೆ ಒಳ್ಳೆಯ ದಿನಗಳಿವೆ' ಎನ್ನುತ್ತಾರೆ.

'ಕನ್ನಡ ಚಿತ್ರರಂಗದಲ್ಲಿ ಹೊಸಬರ ಸರತಿ ಸಾಲೇ ಇದೆ, ಆ ಹೊಸಬರಲ್ಲಿ ಜವಾಬ್ದಾರಿಯಿದೆ. ಹಿರಿಯರು ಇಲ್ಲಿವರೆಗೂ ಉಳಿಸಿಕೊಂಡು ಬಂದಿದ್ದನ್ನು ಮುಂದುವರೆಸುವ, ಬೆಳೆಸುವ ಕನಸಿದೆ. ಅದರಿಂದಲೇ ಕನ್ನಡ ಚಿತ್ರರಂಗವೂ ಬೆಳೆಯಬೇಕಿದೆ' ಎಂದು ಹೇಳುತ್ತಾರೆ.

ಸದ್ಯ ಅಭಿಷೇಕ್ ಅಂಬರೀಶ್ ನಟನೆಯ 'ಬ್ಯಾಡ್ ಮ್ಯಾನರ್ಸ್' ಚಿತ್ರೀಕರಣ ಮುಗಿದಿದ್ದು, ಮುಂದಿನ ಫೆಬ್ರುವರಿಗೆ ಬಿಡುಗಡೆಯಾಗುವ ನಿರೀಕ್ಷೆಯಿದೆ. 'ಕಾಳಿ', ಇನ್ನೂ ಶೀರ್ಷಿಕೆಯಿಡದ ಎಎ04 ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಈ ಮೂರೂ ಚಿತ್ರಗಳು ಭಿನ್ನ ಭಿನ್ನ ಕಥಾ ಹಂದರ ಹೊಂದಿದ್ದು, ಜನರ ವಿಶ್ವಾಸವನ್ನು ಈ ಚಿತ್ರಗಳು ಗಳಿಸಲಿವೆ ಎಂಬ ಭರವಸೆಯನ್ನು ಅವರು ವ್ಯಕ್ತಪಡಿಸುತ್ತಾರೆ.



# ನಿಷೇಧದ ಸೊಲ್ಲು; ಮೌನ ಮುರಿದ ರಶ್ಮಿಕಾ

'ಸಿನಿಮಾದಲ್ಲಿ ಯಾರು ಬೇಕಾದರೂ ಕೆಲಸ ಮಾಡಬಹುದು. ಹಾಗೆ ಯಾರನ್ನೂ ಬ್ಯಾನ್ ಮಾಡೋಕೆ ಆಗೊಲ್ಲ' ನಟ ಧನಂಜಯ ಹೀಗೆ ಹೇಳುವಾಗ, ಹಿರಿಯ ನಟಿ ಭಾವನಾ ಕೂಡ ಅವರ ಅಭಿಪ್ರಾಯ ಸಮರ್ಥಿಸಿದರು. ತಮಗಿಷ್ಟವಾದ ಸಿನಿಮಾ ಆಯ್ಕೆ ಮಾಡಿಕೊಂಡು, ಅಭಿನಯಿಸುವ ಸ್ವಾತಂತ್ರ್ಯ ಎಲ್ಲರಿಗೂ ಇದೆ ಎನ್ನುವುದು ಅವರಿಬ್ಬರ ಪ್ರತಿಕ್ರಿಯೆಯ ಸಾರಾಂಶ.

ರಶ್ಮಿಕಾ ಮಂದಣ್ಣ ಅವರನ್ನು ನಿಷೇಧಿಸಬೇಕು ಎಂಬ ಅಭಿಪ್ರಾಯವನ್ನು ಸಾಮಾಜಿಕ ಜಾಲತಾಣದಲ್ಲಿ ಅನೇಕರು ತೇಲುಬಿಟ್ಟಿರುವುದೇ ಇಂತಹ ಪ್ರತಿಕ್ರಿಯೆಯನ್ನು ಧನಂಜಯ, ಭಾವನಾ ನೀಡಲು ಕಾರಣ. 'ಜಮಾಲಿ ಗುಡ್ಡ' ಸಿನಿಮಾ ಗೋಷ್ಠಿಯಲ್ಲೂ ರಶ್ಮಿಕಾ ಮಂದಣ್ಣ ನಿಷೇಧದ ಕುರಿತ ಪ್ರಶ್ನೆ ಇವರಿಬ್ಬರಿಗೆ ಎದುರಾಯಿತು.

'ಕಾಂತಾರ' ಸಿನಿಮಾವನ್ನು ತಾವಿನ್ನೂ ನೋಡಿಲ್ಲ ಎಂದು ರಶ್ಮಿಕಾ ಮಂದಣ್ಣ ಹೇಳಿದ್ದಕ್ಕೆ ಕನ್ನಡದ ಅನೇಕ ಪ್ರೇಕ್ಷಕರು ಸಾಮಾಜಿಕ ಜಾಲತಾಣದಲ್ಲಿ ಅವರನ್ನು ಟ್ರೋಲ್ ಮಾಡಿದ್ದರು. 'ಅವರನ್ನು ಬ್ಯಾನ್ ಮಾಡಿ' ಎಂದೆಲ್ಲ ಹೂಂಕರಿಸಿದವರೂ ಇದ್ದಾರೆ.

ಇವೆಲ್ಲಕ್ಕೂ ತಣ್ಣಗೇ ಇದ್ದು, ಪ್ರತಿಕ್ರಿಯಿಸದೇ ಇದ್ದ ರಶ್ಮಿಕಾ ಕೂಡ ಕೊನೆಗೆ ಮೌನ ಮುರಿದರು. ತಮ್ಮನ್ನು ಯಾವ ಚಿತ್ರೋದ್ಯಮದವರೂ ನಿಷೇಧಿಸಿಲ್ಲ ಎಂದು ಸ್ಪಷ್ಟಪಡಿಸಿದರು. ಹಿಂದಿಯಲ್ಲಿ ಇತ್ತೀಚೆಗೆ ರಶ್ಮಿಕಾ ಅಭಿನಯದ 'ಗುಡ್‌ಬೈ' ಸಿನಿಮಾ ಬಿಡುಗಡೆಯಾಗಿತ್ತು. ಅದಲ್ಲದೆ ಸಿದ್ಧಾರ್ಥ್ ಮಲ್ಹೋತ್ರ ನಾಯಕನಾಗಿರುವ 'ಮಿಷನ್ ಮಂಜು' ಹಿಂದಿ ಚಿತ್ರ ಕೈಯಲ್ಲಿದೆ. 'ಅನಿಮಲ್' ಹೆಸರಿನ ಮತ್ತೊಂದು ಹಿಂದಿ ಚಿತ್ರದಲ್ಲಿ ನಟಿಸುವುದೂ ನಿಕ್ಕಿಯಾಗಿದೆ. ಅದಲ್ಲದೆ ವಿಜಯ್ ನಾಯಕರಾಗಿರುವ ತಮಿಳಿನ 'ವಾರಿಸು'ಗೆ ರಶ್ಮಿಕಾ ನಾಯಕಿ. 'ಪುಷ್ಪಾ 2' ತೆಲುಗು ಸಿನಿಮಾಗೂ ಅವರು ಸಹಿ ಹಾಕಿ ಆಗಿದೆ. ನಟಿಯಾಗಿ ತಮ್ಮದೇ ಪಥದಲ್ಲಿ ಸಾಗಿರುವ ಅವರನ್ನು ನಿಷೇಧಿಸುವ ಬಗೆಗೆ ಎದ್ದಿರುವ ಸೊಲ್ಲನ್ನೂ ಅನೇಕರು ಟೀಕಿಸಿದ್ದಾರೆ.